# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| ಶ್ರೀ ಕಲ್ಪಡಿ ರಾಘವೇದಂದ್ರ ತಂದೆ ದಿ॥ ಮಲ್ಲಪ್ಪ ಸಿಂಧಿಗೇರಿ ಗ್ರಾಮ ಬಳ್ಳಾರಿ ತಾ॥ ಜಿ॥ | 1)ಶ್ರೀ ಗೊಂಬೇರು ಸೋಮಪ್ಪ ತಂದೆ ರಾಮಪ್ಪ<br>2)ಶ್ರೀ ನಾಗರಾಜ ತಂದೆ ನರಸಪ್ಪ<br>3)ಬಿ. ಮೃತ್ಯುಂಜಯ ತಂದೆ ಬಿ ನಾಗರಾಜ<br>4)ಶ್ರೀ ಬಿ.ಉಮಾಕಾಂತ ತಂದೆ ಬಿ.ನಾಗರಾಜ |

ಅರ್ಜಿದಾರರು:ಶ್ರೀಮತಿ ಸಿರಿಗೇರಿ ಹಂಪಮ್ಮ ಗಂಡ ದಿ॥ ಸಣ್ಣ ಹನುಮಣ್ಣ ಸಿಂಧಿಗೇರಿ ಗ್ರಾಮ ಬಳ್ಳಾರಿ ತಾ॥ ಜಿ॥

**ವಿಷಯ:**ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಸಿಂಧಿಗೇರಿ ಗ್ರಾಮದ ದಿನಾಂಕ: 13-03-2015ರ ಆದೇಶವನ್ನು ರದ್ದು ಪಡಿಸುವ ಬಗ್ಗೆ.

******

ಸರ್ವೆ ನಂ:351/ಎ ವಿಸ್ತೀರ್ಣ: 9.58ರ ಪಹಣಿ ಕಾಲಂ 9ರಲ್ಲಿ 1) ಕಲ್ಪಡಿ ಮಲ್ಲಮ್ಮ ತಂದೆ ದೊಡ್ಡ ಬಸ್ಯನಾಯ್ಕ, ವಿಸ್ತೀರ್ಣ:3.00 2)ಶ್ರೀ ಗೊಂಬೇರು ಸೋಮಪ್ಪ ತಂದೆ ರಾಮಪ್ಪ, ವಿಸ್ತೀರ್ಣ: 2.39 3)ಶ್ರೀ ನಾಗರಾಜ ತಂದೆ ನರಸಪ್ಪ ವಿಸ್ತೀರ್ಣ:2.16 4)ಬಿ. ಮೃತ್ಯುಂಜಯ ತಂದೆ ಬಿ ನಾಗರಾಜ, ಸಿರಿಗೇರಿ ಹಂಪಮ್ಮ ಗಂಡ ಸಣ್ಣ ಹನುಮಣ್ಣ ವಿಸ್ತೀರ್ಣ:2.18 ಪ್ರಕಾರ ತಿದ್ದುಪಡಿ ಮಾಡಿದ ಆದೇಶವನ್ನು ಪರಿಶೀಲನೆಮಾಡಲು ದಿನಾಂಕ:26-04-2016ರಂದು ಶ್ರೀ ನಯೀಮ್ ಮಿಯಾನ್ ವಕೀಲರು ಬಳ್ಳಾರಿ ಇವರು ಶ್ರೀಮತಿ ಸಿರಿಗೇರಿ ಹಂಪಮ್ಮ ಗಂಡ ದಿ॥ ಸಣ್ಣ ಹನುಮಣ್ಣ ಪರವಾಗಿ ವಕಾಲತ್ತು ಮತ್ತು 24425 KLR Act 1964 ಅಡಿಯಲ್ಲಿ ಮರು ಪರಿಶೀಲನೆ ಅರ್ಜಿ ಮತ್ತು ದಿನಾಂಕ: 13-03-2015ರಂದು ಆದೇಶಮಾಡಿದ್ದು ಆದೇಶದ ಮೇರೆಗೆ ಪಹಣಿಯಲ್ಲಿ ವಿಸ್ತೀರ್ಣವನ್ನು ತಿದ್ದುಪಡಿ ಮಾಡಲಾಗಿದ್ದು ಪಹಣಿ M.R.H NO:29/15-16 ದಿನಾಂಕ:23-11-21015 ಆಗಿದ್ದು ಚಾಲ್ತಿಯಲ್ಲಿ ಬರವುದನ್ನು ಮುಂದಿನ ಆದೇಶ ಆಗುವವರೆಗೆ ತಡೆ ಆಜ್ಞೆ ಮಾಡಲು ಅರ್ಜಿ KLR Act 1964 24425 ಹಾಕಿರುತ್ತಾರೆ. ಸದರಿ ಅರ್ಜಿಗಳ ಜೊತೆಯಲ್ಲಿ ಕ್ರಮ ಸಂಖ್ಯೆ 1 ರಿಂದ 16 ದಾಖಲೆಗಳು ನ್ಯಾಯಾಲಯದ ಪರಿಶೀಲನೆಗೆ ಹಾಕಿರುತ್ತಾರೆ.

ನ್ಯಾಯಾಲಯದ ಗಮನಕ್ಕೆ ಬಂದಿರುವ ಮಹತ್ವ ಪೂರ್ಣ ಅಂಶಗಳು

1)ಮಾನ್ಯ ಸಹಾಯಕ ಆಯುಕ್ತರು, ಬಳ್ಳಾರಿ ಇವರ ಆಪೀಲ್ ಸಂಖ್ಯೆ160/2011-12 ದಿನಾಂಕ:17-12-2014ರ ಆದೇಶದಲ್ಲಿ ಪ್ರತಿವಾದಿ 1 ರಿಂದ 7ರ ಇರುತ್ತಾರೆ ಆದರೆ ಸಿರಿಗೇರಿ ಹಂಪಮ್ಮ ಯಂಬುವವರು ಪ್ರತಿವಾದಿಯಾಗಿರುವುದಿಲ್ಲ. ಸದ್ರಿ ಆದೇಶದಲ್ಲಿ ಸದ್ರಿ ಮೇಲ್ಮನವಿ ದಿನಾಂಕ: 17-12-2014 ರಂದು ವಜಾ ಆಗಿದ್ದು ಹಾಗು ಆದೇಶದಲ್ಲಿ ಪಹಣಿ ಕಾಲಂ 10ರಲ್ಲಿ M.R. NO:15/1990-91 ಕಲ್ಪಡಿ ಮಲ್ಲಯ್ಯ ಇರುವುದು M.R. NO:18/1990-91ಯಂದು ತಿದ್ದುಪಡಿ ಮಾಡಲು ಸ್ಪಷ್ಟವಾಗಿ ಆದೇಶ ಮಾಡಿರುತ್ತಾರೆ ಪಹಣಿಯಲ್ಲಿ ಯಾವುದೇ ವಿಸ್ತೀರ್ಣವನ್ನು ತಿದ್ದುಪಡಿ ಮಾಡಲು ಆದೇಶಿಸಿರುವುದಿಲ್ಲ.

2)ಕಂದಾಯ ಆಪೀಲ್ ಸಂಖ್ಯೆ:160/2011-12 ಆಧಾರವಾಗಿ ವಾದಿ ಕಲ್ಪಡಿ ರಾಘವೇಂದ್ರ ಸದ್ರಿ ನ್ಯಾಯಾಲಯಕ್ಕೆ ಅರ್ಜಿಸಲ್ಲಿಸಿ ಪಹಣಿಯಲ್ಲಿ ಇರುವ ವಿಸ್ತೀರ್ಣಗಳನ್ನು ತಿದ್ದುಪಡಿಮಾಡಿಲಿಕ್ಕೆ ಕೋರಿರುತ್ತಾರೆ. ಸದ್ರಿ ಕೋರಿಕೆಯು

ಕಂದಾಯ ಮೇಲ್ಮನವಿ ಆದೇಶಕ್ಕೆ ಸಂಬಂಧಿಸಿರುವುದಿಲ್ಲ ಆದಾಗ್ಯ ಸಂ/ಕಂ/ವಿವಾದ/54/2014–15ರಲ್ಲಿ ಶ್ರೀಮತಿ ಸಿರಿಗೇರಿ ಹಂಪಮ್ಮ ಪ್ರತಿವಾದಿ ಇರುವುದಿಲ್ಲ, ಕಡತ ಪರಿಶೀಲನೆ ಮಾಡಿದಾಗ ಶ್ರೀಮತಿ ಸಿರಿಗೇರಿ ಹಂಪಮ್ಮ ಇವರಿಗೆ ಸದ್ರಿ ವ್ಯಾಜ್ಯದಿಂದ ನೋಟಿಸ್ ಕಳಿಸಿರುವುದಿಲ್ಲ ಮುಖ್ಯವಾಗಿ ಶ್ರೀಮತಿ ಸಿರಿಗೇರಿ ಹಂಪಮ್ಮ ಪ್ರತಿವಾದಿ ಇರುವುದಿಲ್ಲ, ಕಾರಣ ಇವರಿಗೆ ಯಾವುದೇ ಅವಕಾಶ ನೀಡಿರುದಿಲ್ಲ, ವಿಷಯ

ಹೀಗಿರುವಾಗ ಪಹಣ ಕಾಲಂ 9ರಲ್ಲಿ ಹಂಪಮ್ಮ ಇವರಿಗೆ ವಿಸ್ತೀರ್ಣ:3.00 ಎಕರೆಯಿಂದ ಕಡಿತಗೊಂಡು ವಿಸ್ತೀರ್ಣ:2.18 ಆಗಿರುವುದು ಕಾನೂನು ಬಾಹಿರವಾಗಿರುತ್ತದೆ.

2)ಶ್ರೀಮತಿ ಸಿರಿಗೇರಿ ಹಂಪಮ್ಮ ತನ್ನ ಅರ್ಜಿಯ ಜೊತೆಯಲ್ಲಿ ಕ್ರಯ ಪತ್ರ ಸಂಖ್ಯೆ:1116/1954 ಕ್ರಯ ಪತ್ರ ದಿನಾಂಕ:08–03–1958 ಇ.ಸಿ ಪಹಣಿ 1981–82 ರಿಂದ 2000 ಇನಾಂ ರದ್ದತಿ ಆದೇಶ ಪ್ರತಿ 29/4/1991 M.R. NO:2/2004-05 ದಿನಾಂಕ:19–08–2005 ಪಹಣಿ 2007 ರಿಂದ 2009–10 ಮತ್ತು ಸಿವಿಲ್ ನ್ಯಾಯಾಲಯದಲ್ಲಿ ತನ್ನ ಮತ್ತು ಕಲ್ಪಡಿ ರಾಘವೇಂದ್ರ ಇವರ ಮಧ್ಯ ನಡೆದಿರುವ ಸರ್ವೆ ನಂ:351/ಎ ಜಮೀನಿನ ಕುರಿತು ಆಗಿರುವ ಆದೇಶ ಪ್ರತಿಗಳು ಸಲ್ಲಿಸಿ ನ್ಯಾಯಾಲಯಕ್ಕೆ ಮನವರಿಕೆ ಮಾಡಿರುತ್ತಾರೆ.

ಕಲ್ಪಡಿ ರಾಘವೇಂದ್ರ, ಕಲ್ಪಡಿ ಗಾದಿಲಿಂಗಪ್ಪ: ಮೇಲ್ಮನವಿದಾರರು

ಶ್ರೀಮತಿ ಸಿರಿಗೇರಿ ಹಂಪಮ್ಮ ಪ್ರತಿವಾದಿ

principal junior civil judge Bellary ಓ.ಎಸ್ 338/2008 ನ್ಯಾಯಾಲಯವು ತಮ್ಮ ಆದೇಶದಲ್ಲಿ ಕಲ್ಪಡಿ ರಾಘವೇಂದ್ರ 351/ಎ ವಿಸ್ತೀರ್ಣ:3.00 ಎಕರೆ ಜಮೀನಿನ ಮಾಲಿಕರು ತೋರಿಸಲು ವಿಫಲರಾಗಿದ್ದಾರೆಂದು ದಾವೆಯನ್ನು ವಜಾ ಮಾಡಿರುತ್ತಾರೆ. ದಿನಾಂಕ:12–12–2015 ಸದ್ರಿ ದಾವೆಯ ತೀರ್ಪನ್ನು ಯಾವುದೇ ಹೆಚ್ಚುವರಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಆದ್ದರಿಂದ ಸದ್ರಿ ತಿರ್ಪನ್ನು ಒಪ್ಪಿ ಕೊಳಲಾಗುತ್ತದೆ. ಕಾರಣ ಮತ್ತು ವಿಸ್ತೀರ್ಣ:3.00 ಎಕರೆ ಜಮೀನನ್ನು ತಮ್ಮದಾಗಿರುತ್ತದೆಂದು ಪ್ರಸ್ತಾಪಿಸಲು ಉದ್ಭವ ಆಗುವ ಪ್ರಶ್ನೆ ಬರುವುದಿಲ್ಲ ಮತ್ತು ಶ್ರೀಮತಿ ಸಿರಿಗೇರಿ ಹಂಪಮ್ಮ ನವರು ಕಲ್ಪಡಿರಾಘವೇಂದ್ರ ಕಲ್ಪಡಿ ಗಾದಿಲಿಂಗಪ್ಪ ವಿರುದ್ಧ 05632/2010 ಸರ್ವೆ ನಂ:351/ಎ ವಿಸ್ತೀರ್ಣ ದಾವೆ ಸಲ್ಲಿಸಿ, ನ್ಯಾಯಾಲಯವು ಶ್ರೀಮತಿ ಸಿರಿಗೇರಿ ಹಂಪಮ್ಮ ವಿಸ್ತೀರ್ಣ:3.00 ಜಮೀನಿನ ಮೂಲ ಪಟ್ಟಾದಾರರು ತಿರ್ಮಾನಿಸಿ ಕಲ್ಪಡಿ ರಾಘವೇಂದ್ರ ಮತ್ತು ಕಲ್ಪಡಿ ಗಾದಿಲಿಂಗಪ್ಪ ರವರು ವಿರುದ್ಧ ಆದೇಶ ಮಾಡಿರುತಾರೆ ಆದರೆ ಕಲ್ಪಡಿ ರಾಘವೇಂದ್ರ ನವರು ಸದ್ರಿ ಸಿವಿಲ್ ವ್ಯಾಜ್ಯಗಳ ಮತ್ತು ತೀರ್ಪುಗಳು ತಮ್ಮ ವಿರುದ್ಧ ಇರುವ ಬಗ್ಗೆ ಈ ನ್ಯಾಯಾಲಯಕ್ಕೆ ತಿಳಿಸದೇ ಮರುಮಾಚಿ ಈ ನ್ಯಾಯಲಯವನ್ನು ತಪ್ಪುದಾರಿಗೆ ತಿದಿರುತ್ತಾರೆ ಮತ್ತು ತಮ್ಮ ಅನುಕೂಲತೆಗೆ ತಕ್ಕಂತೆ ಆದೇಶ ಪಡಿಯಲ್ಲು ಪ್ರಯತ್ನಸಿರುತ್ತಾರೆ..

ಮೇಲೆ ತಿಳಿಸಿದ ವಾದಾ ವಿವಾದಾಂಶಗಳು, ಕಂಡಿಕೆಗಳು ದಾಖಲಾತಿಗಳು, ಮತ್ತು ಮಾನ್ಯ ಸಿವಿಲ್ ನ್ಯಾಯಾಲಯ ಹೊರಡಿಸಿದ ಅಂಶಗಳೇನೆಂದರೆ ಶ್ರೀಮತಿ ಸಿರಿಗೇರಿ ಹಂಪಮ್ಮ ಸರ್ವೆ ನಂ:351/ಎ ರಲ್ಲಿ ವಿಸ್ತೀರ್ಣ:3.00 ಎಕರೆ ಮಾಲಿಕಳಾಗಿ ಸ್ವಾಧೀನ ಅಬುಭವದಲ್ಲಿದ್ದು ವಾದಿ ಕಲ್ಪಡಿ ರಾಘವೇಂದ್ರ ಸರ್ವೆ ನಂ:351/ಎ ರಲ್ಲಿ ವಿಸ್ತೀರ್ಣ:1.94ಕ್ಕೆ ಸೀಮಿತರಾಗಿದ್ದು ಮಾನ್ಯ ಸಹಾಯಕ ಆಯುಕ್ತರು ಮೇಲ್ಮನವಿ ನಂ160/2001–12 ಆದೇಶ ಪ್ರಯುಕ್ತ ಕೇವಲ M.R. NO15/1990-19 ರಲ್ಲಿ ಬದಿಲಿಸಿ ಅದರ ಸ್ಥಳಕ್ಕೆ M.R. NO18/1990-91 ಎಂದು ಸರಿಪಡಿಸಲು ಅರ್ಹರಾಗಿರುತ್ತಾರೆ, ವಿನಹಪಹಣಿಯ ಕಲಂ9 ರಲ್ಲಿ ವಿಸ್ತೀರ್ಣವನ್ನು ತಿದ್ದುಪಡಿ ಮಾಡಲು ಈ ನ್ಯಾಯಾಲಯದ ವ್ಯಾಪ್ತಿಗೆ ಬರುವದಿಲ್ಲ. ಕಾರಣ ದಿನಾಂಕ:13–03–2015 ಸಂ/ಕಂ/ವಿವಾದ/54/2014–15ರಲ್ಲಿ ಪಹಣಿ ಕಲಂ 9ರಲ್ಲಿ ವಿಸ್ತೀರ್ಣ: ತಿದ್ದುಪಡಿ ಆದೇಶಿಸಿದು ತಪ್ಪು ಮಾಹಿತಿ ಮೇರೆಗೆ ಆಗಿದಂತಹ ಆದೇಶ ಮರು ಪರಿಶೀಲನೆ ಅರ್ಜಿಯು ಸ್ವೀಕರಿಸಲು ಅರ್ಜಿದಾರರು ಕಾನೂನಿನ ಅಡಿಯಲ್ಲಿ ಕಾರಣಗಳು ಕೊಟ್ಟು ದಾಖಲಾತಿಗಳು ಹಾಜರು ಪಡಿಸಿರುತ್ತಾರೆ. ಮಾನ್ಯ ಉಚ್ಚನ್ಯಾಯಾಲ ಕರ್ನಾಟಕ ಎಲ್.ಆರ್.ಆರ್ 1995 ಕೆ.ಎ.ಆರ್ 1871/ರ ಪ್ರಕಾರ ಕೆ.ಎಲ್.ಆರ್ 1964 ಅಡಿಯಲ್ಲಿ ತಹಶೀಲ್ದಾರ ನ್ಯಾಯಾಲಯಕ್ಕೆ ತಾವು ಮಾಡಿದ ಆದೇಶವನ್ನು ಮರು ಪರಿಶೀಲನೆ ಮಾಡಲು ಅಧಿಕಾರ ಇರುತ್ತದೆಂದು ತೀರ್ಪುನಲ್ಲಿ ಹೇಳಿರುತ್ತಾರೆ. ಆದ್ದರಿಂದ ಅಂಶಗಳನ್ನು ಪರಿಗಣಿಸಿ ಶ್ರೀಮತಿ ಸಿರಿಗೇರಿ ಹಂಪಮ್ಮ ಗಂಡ ದಿ॥ ಸಣ್ಣ ಹನುಮಣ್ಣ ಇವರ ಮರು ಪರಿಶೀಲನೆ ಅರ್ಜಿಯನ್ನು ಸ್ವೀಕರಿಸಿ ದಿನಾಂಕ: 13/03/2015 ರಂದು ಮಾಡಿರುವ ಆದೇಶವು ರದ್ದು ಮಾಡಿ ಈ ಕೆಲಗಿನಂತೆ ಆದೇಶ

-::ಆದೇಶ::-

ಸಂ/ಕಂ/ವಿವಾದ/54/2016-15 ದಿನಾಂಕ: 11/7/2016

ಸರ್ವೆ ನಂ:351/ಎ ವಿಸ್ತೀರ್ಣ:9.58 ಎಕರೆ ಸಿಂಧಿಗೇರಿ ಗ್ರಾಮ ಬಳ್ಳಾರಿ ತಾಲೂಕು ಜಮೀನಿಗೆ ಸಂಬಂಧಿಸಿದ ಆದೇಶ ಸಂ/ಕಂ/54/14-15 ದಿನಾಂಕ:13-03-2015 ರದ್ದು ಮಾಡಿ ಇದರ ಅನುಗುಣವಾಗಿ ಮಾಡಿದ M.R.H NO:29/15-16 ದಿನಾಂಕ::23-11-2015 ಪಹಣಿ ಕಲಂ9ರಲ್ಲಿ ವಿಸ್ತೀರ್ಣ ತಿದ್ದುಪಡಿ ಆಗಿದ್ದನು ರದ್ದುಮಾಡಿ ಮಾನ್ಯ ಸಹಾಯಕ ಆಯುಕ್ತರು, ಬಳ್ಳಾರಿರವರು ಮಾಡಿದ ಆದೇಶ 160/2011-12 ದಿನಾಂಕ:17-12-2014ರ ಪ್ರಕಾರ M.R. NO:15/1990-91 ಕಲ್ಪಡಿ ಮಲ್ಲಯ್ಯ ಎಂದು ಇರುವುದ M.R. NO:18/1990-91 ಎಂದು ತಿದ್ದುಪಡಿ ಮಾಡಲು ಆದೇಶಿಸಿ M.R.H NO:29/15-16 ದಿನಾಂಕ: 23-11-2015ರ ಹಿಂದೆ ಇರುವಂತಹ ಪಹಣಿ ವಿಸ್ತೀರ್ಣ ಕಾಲಂ9ರಲ್ಲಿ ಮುಂದುವರಿಸಲು ಆದೇಶಿಸಿದೆ.

ಈ ಆದೇಶವು ಇಂದು ದಿನಾಂಕ: 11.7.2016 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಬಳ್ಳಾರಿ

ತಹಶೀಲ್ದಾರರು, ಬಳ್ಳಾರಿ
Tasildar, Bellary.

ಪ್ರತಿಯನ್ನು:

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ.

Received copy
N.M. Advocate
Bellary
25/7/16

ರವಾನಿಸಲಾಗಿದೆ.
25/7/16

Copy recd
Adv. for Bel